# ಕರ್ನಾಟಕ ವಿಧಾನ ಪರಿಷತ್ತು.

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1023(1149 &1150) |
| ವಿಧಾನ ಸಭಾ ಸದಸ್ಯರ ಹೆಸರು | ಶ್ರೀ ಶಶಿಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 15.12.2023 |
| ಉತ್ತರಿಸುವ ಸಚಿವರು | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ,<br>ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | 2020 ರಲ್ಲಿ ಕೇಂದ್ರ ಸರ್ಕಾರವು ಪರಿಶಿಷ್ಟ ಪಂಗಡ ತಿದ್ದುಪಡಿ ಕಾಯ್ದೆ 2020ರ ಅಧಿಸೂಚನೆ ಸಂಖ್ಯೆ:20.03.2020 ರನ್ವಯ ನಾಯ್ಕಡ ನಾಯಕ ( ಪರಿವಾರ ತಳವಾರ ಒಲಗೊಂಡಂತೆ) ಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡಿ ಆದೇಶ ಮಾಡಿದ್ದು ಕರ್ನಾಟಕ ರಾಜ್ಯ ಸರ್ಕಾರದವು ಈ ಆದೇಶದಂತೆ ಗೆಜೆಟ್ ಹೊರಡಿಸಿ ನಂತರ ದಿನಾಂಕ:20.10.2022 ರಂದು ಪ್ರುವರ್ಗ 1 ರಲ್ಲಿ ಬರುವ ತಳವಾರ, ಪರಿವಾಋ ಜಾತಿಗಳನ್ನು ಹಿಂದುಳಿದ ವರ್ಗಗಳ ಜಾತಿಗಳ ಪಟ್ಟಿಯಿಂದ ತೆಗೆದು ಹಾಕಿ ಆದೇಶಿಸಿದ್ದು ತದನಂತರ ಈ ಜಾತಿಗಳಿಗೆ 2022ರ ಡಿಸೆಂಬರ್ ತಿಂಗಳಿನಿಂದ ಪಟ್ಟಿಯಿಂದ ತೆಗೆದು ಹಾಕಿ ಆದೇಶಶಿಸಿದ್ದು ತದನಂತರ ಈ ಜಾತಿಗಳಿಗೆ 2022 ರ ಡಿಸೆಂಬರ್ ತಿಂಗಳಿನಿಂದ ಎಸ್ ಟಿ ಜಾತಿ ಪ್ರಮಾಣ ಪರ್ರವನ್ನು ನೀಡಲು ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ: | ಸರ್ಕಾರದ ಗಮನಕ್ಕೆ ಬಂದಿರುತ್ತದೆ, **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ:ಹಿಂವಕ 26 ಬಿಸಿಎ 2022, ದಿನಾಂಕ:29-10-2022ರ ಆದೇಶದಲ್ಲಿ** ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಮೀಸಲಾತಿ ಜಾತಿ ಪಟ್ಟಿಯ ಆದೇಶ ಸಂಖ್ಯೆ:ಸಕಇ 225 ಬಿಸಿಎ 2000, ದಿನಾಂಕ:30/03.2002ರ ಪ್ರವರ್ಗ-1ರ 88(ಹೆಚ್) ನಲ್ಲಿನ ತಳವಾರ(Talawara)ಜಾತಿ ಹಾಗೂ ಪ್ರವರ್ಗ-1 ರ 88(ಕೆ) ನಲ್ಲಿನ ಪರಿವಾರ ನಾಯಕ (Parivara Nayaka) ಜಾತಿಗಳನ್ನು ಹಿಂದುಳಿದ ವರ್ಗಗಳ ಮೀಸಲಾತಿ ಜಾತಿ ಪಟ್ಟಿಯಿಂದ ತೆಗೆದುಹಾಕಿ ಆದೇಶಿಸಿದೆ. |
| ಆ | ಹಾಗಿದ್ದಲ್ಲಿ ಸರ್ಕಾರವು ಆದೇಶವನ್ನು ವಿಳಂಬವಾಗಿ ಹೊರಡಿಸಿರುವುದುದರಿಂದ ದಿನಾಂಕ:29.10.2022 ಕ್ಕಿಂತಲೂ ಮೊದಲು ಈ ಸಮುದಾಯಕ್ಕೆ ಸೇರಿದ (ತಳವಾರ ಮತ್ತು ಪರಿವಾರ) ಫಲಾನುಭವಿಗಳು 2022-23 ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿ ಸಲ್ಲುಸುವಾಗ ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ಬರುವ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಿಂದ ಅರ್ಜಿ ಸಲ್ಲಿಸಿದ್ದು ನಂತರ, ಸರ್ಕಾರವು 2022 ರ ಡಿಸೆಂಬರ್ ತಿಂಗಳಿನಲ್ಲಿ ಈ ಜಾತಿಗಳಿಗೆ ST ಪ್ರಮಾಣ ಪತ್ರವನ್ನು ನೀಡಲು ಪ್ರಾರಂಬಿಸಿ ಈಗಾಗಲೇ ಅರ್ಜಿ ಸಲ್ಲಿಸಿದವರು ಫಲಾನುಭವಿಗಳಾಗಿ ಆಯ್ಕೆಯಾಗಿದ್ದು ಆದರೆ ಈಗ ದಾಖಲಾತಿ ಪತ್ರಗಳನ್ನು | ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ಬರುವ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಲ್ಲಿ ಪರಿಶಿಷ್ಟ ಪಂಗಡದ Naikaḍ Nayaka (Including Parivara and Talawara) ಜಾತಿಯ ಫಲಾನುಭವಿಗಳ ಅರ್ಜಿಗಳು ಅರ್ಹತೆಯನ್ನು ತಿರಸ್ಕರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ 2022-23 ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಪಂಗಡದ Naikaḍ Nayaka (Including Parivara and Talawara) ಸೇರಿದ ಫಲಾನುಭವಿಗಳು ಹಿಂದುಳಿದ ವರ್ಗಗಳ ಇಲಾಖೆಯಡಿಯಲ್ಲಿ ಬರುವ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದಲ್ಲಿ ಸ್ವೀಕೃತವಾದ ಅರ್ಜಿಗಳ ಮಾಹಿತಿಯನ್ನು ಒದಗಿಸಿದಲ್ಲಿ ನಿಯಮಾನುಸಾರ ಸೌಲಭ್ಯ ಒದಗಿಸಲು ಕ್ರಮವಹಿಸಲಾಗುವುದು. |

| | | |
|---|---|---|
| | ಸಲ್ಲಿಸುವಾಗ ಪರಿಶಿಷ್ಟ ಪಂಗಡ ಎಂದು ಪ್ರಮಾಣ ಪತ್ರ ನೀಡಿರುವುದರಿಂದ ಇಲಾಖೆಯ ನಿಗಮದಿಂದ ನೀವುಗಳು (ಫಲಾನುಭವಿಗಳು) ಇಲಾಖೆಗೆ ಒಳಪಡುವುದಿಲ್ಲವೆಂದು ಅವರ ಅರ್ಹತೆಯನ್ನು ತಿರಸ್ಕರಿಸುತ್ತಿರುವ ಸರ್ಕಾರ ಗಮನಕ್ಕೆ ಬಂದಿದೆಯೇ: ಬಂದಿದಲ್ಲಿ ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು (ಸ್ಪಷ್ಟೀಕರಣ ನೀಡುವುದು) | |
| ಇ | ಯಾವ ಕಾಲಮಿತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಿ, ಈಗಾಗಲೇ ಅರ್ಜಿ ಸಲ್ಲಿಸಿ ಆಯ್ಕೆಯಾದ ಈ ವರ್ಗದ ಫಲಾನುಭವಿಗಳಿಗೆ ಈ ಯೋಜನೆಯನ್ನು ಸೂಕ್ತವಾಗಿ ತಲುಪಿಸಲಾಗುವುದು ? ( ವಿವರ ನೀಡುವುದು) | ಸಮಸ್ಯೆಯನ್ನು ಈಗಾಗಲೇ ಪರಿಹರಿಸಲಾಗಿದೆ, ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ3 ಎಸ್ ಟಿಸಿ 2023(ಭಾ) ದಿನಾಂಕ:06.11.2023ರಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದಲ್ಲಿರುವ ವಿವಿಧ ಎಲ್ಲಾ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಪರಿಶಿಷ್ಟ ಪಂಗಡದ Naikaḍ, Nayaka (Including Parivara and Talawara) ಇವರು ಸಹ ಅರ್ಹರಿರುತ್ತಾರೆ. ಅದರನ್ವಯ, ಪರಿವಾರ/ತಳವಾರ ಪಂಗಡದವರಿಗೂ ಸಹ ಅವಕಾಶ ಕಲ್ಪಿಸಲು ಕೂಡಲೇ ಕ್ರಮವಹಿಸಲು ಸೂಚಿಸಿದೆ.<br><br>ಸರ್ಕಾರದ ಸುತ್ತೋಲೆಯನ್ವಯ 2023-24ನೇ ಸಾಲಿನಲ್ಲಿ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ವತಿಯಿಂದ ಎಲ್ಲಾ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳಿಗೆ ಪರಿಶಿಷ್ಟ ಪಂಗಡದ Naikaḍ, Nayaka (Including Parivara and Talawara) ಸೇರಿದ ಫಲಾನುಭವಿಗಳ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ. **ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಲು ಕೊನೆ ದಿನಾಂಕ:15.12.2023 ಅಗಿರುತ್ತದೆ.** |

ಸಕಇ/84/ಎಸ್‌ಟಿಸಿ/2023

(ಬಿ. ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 3 ಎಸ್‌ಟಿಸಿ 2023 (ಭಾ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:06.11.2023

## ಸುತ್ತೋಲೆ

ದಿನಾಂಕ:19.03.2020 ರಂದು ಭಾರತ ಸಂವಿಧಾನ The Constitution (Scheduled Tribes) Order (Amendment) Act, 2020 ರಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಕ್ರ.ಸಂ.38ರಲ್ಲಿ Naikda, Nayaka, ಎಂಬ ಪದಗಳ ಬದಲಾಗಿ Naikda, Nayaka (Including Parivara and Talawara) ಈ ರೀತಿ ತಿದ್ದುಪಡಿ ಮಾಡಲಾಗಿದೆ. ಇದರಂತೆ ರಾಜ್ಯ ಸರ್ಕಾರವು ಸುತ್ತೋಲೆ ಸಂಖ್ಯೆ:ಸಕಇ 23 ಎಸ್‌ಎಡಿ 2009, ದಿನಾಂಕ:28.05.2020, 06.06.2020, 31.08.2020, 15.09.2020 ಮತ್ತು ಸಕಇ 180 ಎಸ್‌ಎಡಿ 2020(ಭಾ), 29.01.2022ರಲ್ಲಿ ಮೇಲ್ಕಂಡ ಜನಾಂಗವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸಲಾಗಿದೆ.

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿರುವ ವಿವಿಧ ಎಲ್ಲಾ ಯೋಜನೆಗಳ ಸೌಲಭ್ಯಗಳನ್ನು ಪಡೆಯಲು ಮೇಲಿನ ಸುತ್ತೋಲೆಗಳನ್ವಯ Naikda, Nayaka (Including Parivara and Talawara) ಇವರು ಸಹ ಅರ್ಹರಿರುತ್ತಾರೆ. ಅದರನ್ವಯ, ಪರಿವಾರ/ತಳವಾರ ಪಂಗಡದವರಿಗೂ ಸಹ ಅವಕಾಶ ಕಲ್ಪಿಸಲು ಕೂಡಲೇ ಕ್ರಮವಹಿಸಲು ಸೂಚಿಸಿದೆ.

(ಎಂ.ಸುಮಿತ್ರ)
ಸರ್ಕಾರದ ಉಪ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ.

**ಇವರಿಗೆ:**

1. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಬೆಂಗಳೂರು.
3. ಜಿಲ್ಲಾಮಟ್ಟದ ಅಧಿಕಾರಿಗಳು.
4. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ.